ಅಮಾನತ್ತಿನಲ್ಲಿಡಲಾಗಿದೆ.

ಇ) ಸುಮಾರು ರೂ. 16-00 ಲಕ್ಷಗಳು.

ಈ) ಸಿ.ಓ.ಡಿ. ತನಿಖೆಗೆ ಒಪ್ಪಿಸಲು ಕೋರಿ ಪ್ರಸ್ತಾವನೆಯನ್ನು ಒಳಾಡಳಿತ ಇಲಾಖೆಗೆ ಸಲ್ಲಿಸಲಾಗಿದೆ.

ರಾಜ್ಯದಲ್ಲಿ ನಡೆಯುವ ಅಕ್ರಮ ಗಣಿಗಾರಿಕೆ.

333(494)

ಶ್ರೀ ಕೆ.ಎನ್.ಸುಬ್ಬಾರೆಡ್ಡಿ (ಬಸವನಗುಡಿ): ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಆ) ರಾಜ್ಯದಲ್ಲಿ ಒಟ್ಟು ಎಷ್ಟು ಅಕ್ರಮ ಗಣಿಗಾರಿಕೆಯನ್ನು ಗುರುತಿಸಲಾಗಿದೆ?

ಶ್ರೀ ವಿ.ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು):

ಅ) ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟಲು ಸರ್ಕಾರವು ಖನಿಜಗಳು ದೊರೆಯುವ ಸ್ಥಳಗಳಲ್ಲಿ ಅಂದರೆ ಇಳಕಲ್, ಕನಕಪುರ, ಸೇಡಂ ಹೊಸಪೇಟೆ, ಚಾಮರಾಜ ನಗರಗಳಲ್ಲಿ ಇಲಾಖೆಯ ಕಛೇರಿಗಳನ್ನು ಸ್ಥಾಪಿಸಿರುತ್ತದೆ. ಅಲ್ಲದೆ ಅನಧಿಕೃತ ಸಾಗಾಣಿಕೆಯನ್ನು ತಡೆಹಿಡಿಯುವುದಕ್ಕಾಗಿ ರಾಜ್ಯದಲ್ಲಿ 19 ತನಿಖಾ ಠಾಣೆಗಳನ್ನು ತೆರೆದಿದ್ದು ಇವುಗಳ ಮೂಲಕ ಅಕ್ರಮ ಸಾಗಾಣಿಕೆಯನ್ನು ತಡೆಹಿಡಿಯಲಾಗಿದೆ. ಕೇಂದ್ರ ಕಛೇರಿಯಲ್ಲಿ ಸಂಚಾರಿ ತನಿಖಾ ತಂಡವನ್ನು ರಚಿಸಿ ಅದರ ಮುಖಾಂತರವೂ ಅಕ್ರಮ ಗಣಿಗಾರಿಕೆ ಮತ್ತು ಅಕ್ರಮ ಸಾಗಾಣಿಕೆಯನ್ನು ತಡೆಹಿಡಿಯಲಾಗುತ್ತಿದೆ.

ಆ) ಒಟ್ಟು 83 ತಾಲ್ಲೂಕುಗಳಲ್ಲಿ 549.

ಬೀದಿ ಭಿಕ್ಷಕರ ಹಾವಳಿ.

334(495)